**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ-72 ರಡಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರ.**

ವಿಷಯ:

ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದ ಜೊತೆಗೆ ಹಾಪ್ ಕಾಮ್ಸ್ ಆಡಳಿತ ನ್ಯಾಯಮಂಡಳಿ ಬೇಜವಾಬ್ದಾರಿತನದಿಂದಾಗಿ, ಜಿಲ್ಲೆಯಲ್ಲಿ ಹಾಪ್ ಕಾಮ್ಸ್ ಮಳಿಗೆಗಳು ಹೆಚ್ಚು ಇಲ್ಲದೇ ಅವುಗಳ ಸೌಲಭ್ಯ ಜಿಲ್ಲೆಯ ಜನರಿಗೆ ಸಿಗದೇ ಖಾಸಗಿ ಮಾರುಕಟ್ಟೆಯಲ್ಲಿ ದುಬಾರಿ ಬೆಲೆಗೆ ಹಣ್ಣು ಹಂಪಲುಗಳನ್ನು ಖರೀದಿಸುವಂತಾಗಿದೆ.

ಕೋಲಾರ ಜಿಲ್ಲೆಯಲ್ಲಿ ಶೇ 75% ಕ್ಕೂ ಹೆಚ್ಚು ತೋಟಗಾರಿಕೆ ಬೆಳೆಗಳಾದ ತರಕಾರಿ ಹಾಗೂ ಹಣ್ಣುಗಳನ್ನು ಬೆಳೆಯುತ್ತಿದ್ದು, ಈ ಬೆಳೆಗಳಲ್ಲಿ ಬಹಳಷ್ಟು ತರಕಾರಿ ಹಣ್ಣುಗಳು ಹಾಪ್ ಕಾಮ್ಸ್ ನಿಂದ ಖರೀದಿಸಿ ಎಲ್ಲಾ ನಗರಗಳಲ್ಲಿ ಸ್ಥಾಪಿಸಿರುವ ಮಳಿಗೆಗಳಲ್ಲಿ ನೇರವಾಗಿ ಗುಣಮಟ್ಟದ ತರಕಾರಿ, ಹಣ್ಣುಗಳನ್ನು ಮಾರುತ್ತಿದ್ದು, ಕೋಲಾರ ನಗರದಲ್ಲಿ ಎಲ್ಲಾ ಬಡಾವಣೆಗಳಲ್ಲಿ ಸಗಟು ಖರೀದಿ ಕೇಂದ್ರ ಸ್ಥಾಪಿಸಿದ್ದು, ಹಾಪ್ ಕಾಮ್ಸ್ ನಿಂದ ಗುಣಮಟ್ಟದ ಕ್ರಿಮಿನಾಶಕಗಳು ಕಡಿಮೆ ದರದಲ್ಲಿ ಮಾರಲಾಗುತ್ತಿತ್ತು, ಆದರೆ ಇತ್ತೀಚಿನ ದಿನಗಳಲ್ಲಿ ಹಾಪ್ ಕಾಮ್ಸ್ ಬಹುತೇಕವಾಗಿ ತನ್ನ ವ್ಯವಹಾರವನ್ನು ನಿಲ್ಲಿಸಿರುವುದರಿಂದ, ರೈತರು ತಾನು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ, ಹಾಗೂ ಗುಣಮಟ್ಟದ ಮತ್ತು ಕಡಿಮೆ ಬೆಲೆಗೆ ಕ್ರಿಮಿನಾಶಕ ಹಾಗೂ ಗೊಬ್ಬರಗಳು ಸಿಗದೆ ರೈತರಿಗೆ ತೊಂದರೆಯಾಗಿರುವ ವಿಷಯವನ್ನುಸರ್ಕಾರದ ಗಮನ ಸೆಳೆಯುವ ಬಗ್ಗೆ.

ಉತ್ತರ:

1. ಹಾಪ್ ಕಾಮ್ಸ್, ಬೆಂಗಳೂರು ಸಂಸ್ಥೆಯ ಅಧೀನದಲ್ಲಿ ಕೋಲಾರ ಜಿಲ್ಲೆಯಲ್ಲಿ ಶಾಖೆಯನ್ನು 1991 ರಿಂದ ಪ್ರಾರಂಭಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಪ್ರಸ್ತುತ 14 ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳು ಇಂತಿವೆ. ಕೋಲಾರ-4, ಕೆ.ಜಿ.ಎಫ್-2, ಬಂಗಾರಪೇಟೆ-1, ಮುಳಬಾಗಿಲು-1, ಚಿಂತಾಮಣಿ-1, ಶ್ರೀನಿವಾಸಪುರ-2, ಕೈವಾರ-1, ಹೆಚ್.ಕ್ರಾಸ್-1 ಮತ್ತು ವೇಮಗಲ್-1. ಈ ಜಿಲ್ಲೆಯಲ್ಲಿ ವಾರ್ಷಿಕ ವಹಿವಾಟು ಸರಾಸರಿ ರೂ. 4.00 ಕೋಟಿಗೂ ಅಧಿಕವಿದೆ. ಈ ಹಿಂದೆ ಕೋಲಾರ ಶಾಖೆಯ ಅಧೀನದಲ್ಲಿ 20 ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿದ್ದವು. ರಸ್ತೆ ಅಗಲೀಕರಣ, ರೈಲ್ವೆ ನಿಲ್ದಾಣ ಹಾಗೂ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿ ದುಬಾರಿ ಬಾಡಿಗೆ ಹಾಗೂ ಮಾರುಕಟ್ಟೆ ಪೈಪೋಟಿಗಳಿಂದಾಗಿ 6 ಮಾರಾಟ ಮಳಿಗೆಗಳು ಇರುವುದಿಲ್ಲ. ಪ್ರಸ್ತುತ ಕೋಲಾರ ಶಾಖೆಯಲ್ಲಿ 30 ಖಾಯಂ ನೌಕರರು ಕಾರ್ಯನಿರ್ವಹಿಸುತ್ತಿದ್ದು, ಒಂದು ಉಗ್ರಾಣ ಮತ್ತು ಎರಡು ಸರಕು ಸಾಗಾಣಿಕೆ ವಾಹನಗಳು ಇರುತ್ತವೆ. ಕೋಲಾರ ಶಾಖೆಯು ಪ್ರತಿ ಮಾಹೆಯಲ್ಲಿ ಸರಾಸರಿ 55 ಟನ್ ಹಣ್ಣು ತರಕಾರಿಗಳ ವಹಿವಾಟನ್ನು ನಡೆಸಲಾಗುತ್ತಿದ್ದು, ಇದರ ಮೌಲ್ಯ ರೂ.35.00 ಲಕ್ಷಗಳಾಗಿದೆ. ಪ್ರತಿ ಮಾಹೆಯಲ್ಲಿ ಸರಾಸರಿ 225 ರೈತರಿಂದ ಹಣ್ಣು ತರಕಾರಿಗಳನ್ನು ಖರೀದಿಮಾಡಲಾಗುತ್ತಿದೆ.

2. ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು ಹಾಗೂ ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ತಲಾ 01 ರಂತೆ ಒಟ್ಟು 03 ಸಂಖ್ಯೆ ಗೊಬ್ಬರ ಮತ್ತು ಕ್ರಿಮಿನಾಶಕ ಮಾರಾಟ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಮೂರು ಕೇಂದ್ರಗಳಲ್ಲಿ ವಾರ್ಷಿಕವಾಗಿ ರೂ.10.00 ಕೋಟಿಗೂ ಹೆಚ್ಚು ವಹಿವಾಟು ನಡೆಸಲಾಗುತ್ತಿದೆ. ಗೊಬ್ಬರ ಮತ್ತು ಕ್ರಿಮಿನಾಶಕ ಮಾರಾಟ ಕೇಂದ್ರಗಳಲ್ಲಿ ರೈತರಿಗೆ ಅವಶ್ಯಕವಾದ ರಾಸಾಯನಿಕ ಗೊಬ್ಬರಗಳಾದ ಯೂರಿಯಾ, ಎಸ್.ಎಸ್.ಪಿ., ಎಂ.ಒ.ಪಿ., ಡಿ.ಎ.ಪಿ., ಕಾಂಪ್ಲೆಕ್ಸ್ ರಾಸಾಯನಿಕ ಗೊಬ್ಬರಗಳು, ಬೇವಿನ ಹಿಂಡಿ, ಹೊಂಗೆ ಹಿಂಡಿ, ಮತ್ತು ಪೀಡೆ ನಾಶಕಗಳನ್ನು ಯೋಗ್ಯ ದರದಲ್ಲಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ. ಪ್ರತಿ ಮಾಹೆಯಲ್ಲಿ ಮೂರು ಕೇಂದ್ರಗಳೂ ಸೇರಿ 500 ಕ್ಕೂ ಹೆಚ್ಚು ರೈತರು ಪ್ರಯೋಜನ ಪಡೆಯುತ್ತಿದ್ದಾರೆ.

**HORTI 183 HGM 2022**

(ಮುನಿರತ್ನ)
**ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**